ಕರ್ನಾಟಕ ವಿಧಾನ ಸಭೆ

ಶುಕ್ರವಾರ 10ನೇ ಜುಲೈ 1992

ಸದನವು ವಿಧಾನ ಸೌಧದಲ್ಲಿರುವ ವಿಧಾನ ಸಭೆಯ ಸಭಾಂಗಣದಲ್ಲಿ
ಬೆಳಿಗ್ಗೆ 11.20 ಗಂಟೆಗೆ ಸಮಾವೇಶಗೊಂಡಿತು.

ಅಧ್ಯಕ್ಷರು ಶ್ರೀ ಎಸ್. ಎಂ. ಕೃಷ್ಣರವರು ಪೀಠವನ್ನು ಅಲಂಕರಿಸಿದ್ದರು.

ಸಂತಾಪ ಸೂಚನೆಗಳು

ಅಧ್ಯಕ್ಷರು : ಶ್ರೀಯುತರುಗಳಾದ ಡಾ॥ ಎನ್.ಎಸ್. ಹುಂಬರವಾಡಿ, ಕಲ್ಯಾಣರಾವ್ ಮೊಳಕೇರಿ, ಎಸ್.ವಿ. ಅಗ್ನಿಹೋತ್ರಿ, ಎಂ. ಹನುಮಂತಯ್ಯ, ವಿ.ಕೃ. ಗೋಕಾಕ್, ಪಾ.ವೆಂ. ಆಚಾರ್ಯ, ಸತ್ಯಜಿತ್‌ರಾಯ್ ಹಾಗೂ ಎಂ. ಬಸವಪ್ಪನ್ನಯ್ಯನವರು ನಿಧನರಾದ ಸುದ್ದಿಯನ್ನು ನೊಂದ ಮನಸ್ಸಿನಿಂದ ಸದನಕ್ಕೆ ತಿಳಿಸುತ್ತೇನೆ.

1. ಈ ಸಭೆಯ ಮಾಜಿ ಸದಸ್ಯ ಡಾ. ಎನ್.ಎಸ್. ಹುಂಬರವಾಡಿ ಅವರು ದಿನಾಂಕ ಮೇ, 16ರಂದು ರಸ್ತೆ ಅಪಘಾತದಲ್ಲಿ ಅಪಮೃತ್ಯುಗೀಡಾದರು. ಶ್ರೀಯುತರು 1985ರಿಂದ 1989ರ ವರೆಗೆ ಈ ಸದನದಲ್ಲಿ ಮುಂಡರಗಿ ಕ್ಷೇತ್ರವನ್ನು ಪ್ರತಿನಿಧಿಸಿ ಅಮೋಘ ಸೇವೆ ಸಲ್ಲಿಸಿದವರು. ವೃತ್ತಿಯಲ್ಲಿ ವೈದ್ಯರಾಗಿದ್ದ ಹುಂಬರವಾಡಿಯವರು ದಾನಿಗಳಾಗಿ, 'ಜನಪ್ರಕಾಶ' ಪತ್ರಿಕೆಯ ಸ್ಥಾಪಕ ಸಂಪಾದಕರಾಗಿ, ಲಯನ್ಸ್ ಕ್ಲಬ್‌ನ ಅಧ್ಯಕ್ಷರಾಗಿ ಸೇವೆ ಸಲ್ಲಿಸಿರುವುದಲ್ಲದೆ, ಶಿಕ್ಷಣ ಮತ್ತು ಕೃಷಿ ಕ್ಷೇತ್ರಗಳಲ್ಲಿಯೂ ಗಣನೀಯ ಸೇವೆ ಸಲ್ಲಿಸಿ ಜನರಿಗೆ ಪ್ರೀತಿ ಪಾತ್ರರಾಗಿದ್ದರು.

2. ವಿಧಾನ ಸಭೆಯ ಮಾಜಿ ಸದಸ್ಯ ಶ್ರೀ ಕಲ್ಯಾಣರಾವ್ ಮೊಳಕೇರಿಯವರು ಸಹ ಮೇ 16ರಂದೇ ರಸ್ತೆ ಅಪಘಾತದಲ್ಲಿ ದಿವಂಗತರಾದರು. ಶ್ರೀಯುತರು 1985ರಿಂದ 1989ರವರೆಗೆ ಭಾಲ್ಕಿ ಕ್ಷೇತ್ರವನ್ನು ಪ್ರತಿನಿಧಿಸಿ ಬಹುಕಾಲ ನೆನಪಿನಲ್ಲುಳಿಯುವಂತಹ ಸೇವೆ ಸಲ್ಲಿಸಿರುತ್ತಾರೆ. ವೃತ್ತಿಯಲ್ಲಿ ವಕೀಲರೂ, ಕೃಷಿಕರೂ ಆಗಿದ್ದ ಶ್ರೀಯುತ ಮೊಳಕೇರಿಯವರು ಜಾನಪದ ಕಲೆ, ನಾಟಕ, ಸಾಂಸ್ಕೃತಿಕ ಹಾಗೂ ಕ್ರೀಡಾ ಚಟುವಟಿಕೆಗಳಲ್ಲಿ ಆಸಕ್ತರಾಗಿದ್ದು, ಶೋಷಿತ ವರ್ಗದವರ ಹಕ್ಕಿಗಾಗಿ ಅವಿರತವಾಗಿ ಹೋರಾಡಿದರು. ತಮ್ಮ ಕ್ಷೇತ್ರದ ಅಭಿವೃದ್ಧಿಗಾಗಿ ತಮ್ಮನ್ನೇ ಸಮರ್ಪಿಸಿಕೊಂಡಿದ್ದರು.

3. ಈ ಸಭೆಯ ಮಾಜಿ ಮುಖ್ಯ ಸಚೇತಕ ಶ್ರೀ ಎಸ್.ವಿ. ಅಗ್ನಿಹೋತ್ರಿಯವರು ಮೇ 31ರಂದು ದೈವಾಧೀನರಾದರು. 3 ಮತ್ತು 4ನೇ ವಿಧಾನ ಸಭೆಗೆ ಧಾರವಾಡ ಕ್ಷೇತ್ರದಿಂದ ಆಯ್ಕೆಯಾಗಿದ್ದ ಶ್ರೀಯುತರು 1968ರಲ್ಲಿ ಶ್ರೀ ವೀರೇಂದ್ರ ಪಾಟೀಲರು ಮುಖ್ಯಮಂತ್ರಿಗಳಾಗಿದ್ದಾಗ ಮುಖ್ಯ ಸಚೇತಕರಾಗಿದ್ದರು. ಸ್ವತಃ ಗಾಯಕರಾಗಿದ್ದು, ವೃತ್ತಿಯಲ್ಲಿ ಕೃಷಿಕರಾಗಿದ್ದ ಅಗ್ನಿಹೋತ್ರಿಯವರು ಹುಬ್ಬಳ್ಳಿ–ಧಾರವಾಡ ಮಹಾನಗರ ಪಾಲಿಕೆಯ ಸದಸ್ಯರಾಗಿ, ಶಿಕ್ಷಕರ ಸಂಘದ ಅಧ್ಯಕ್ಷರಾಗಿ, ಸದನ ಸಮಿತಿಯ ಸದಸ್ಯರಾಗಿ, ಕರ್ನಾಟಕ ಪಟ್ಟಣ ಪ್ರದೇಶ ನೀರು ಸರಬರಾಜು ಮತ್ತು ಒಳಚರಂಡಿ ಮಂಡಳಿಯ ಅಧ್ಯಕ್ಷರಾಗಿ ಸೇವೆ ಸಲ್ಲಿಸಿ ಅಮರರಾಗಿದ್ದಾರೆ.

4. ಪ್ರಜಾಪ್ರತಿನಿಧಿ ಸಭೆ ಹಾಗೂ ಈ ಸಭೆಯ ಮಾಜಿ ಸದಸ್ಯ ಶತಾಯುಸಿ ಶ್ರೀ ಎಂ. ಹನುಮಂತಯ್ಯನವರು ದಿನಾಂಕ ಜೂನ್ 6ರಂದು ತಮ್ಮ 115ನೇ ವಯಸ್ಸಿನಲ್ಲಿ ನಿಧನರಾದರು. 1941ರಿಂದ 1952ರವರೆಗೆ ಪ್ರಜಾಪ್ರತಿನಿಧಿ ಸಭೆಯ ಹಾಗೂ 1952ರಿಂದ 1953ರವರೆಗೆ ವಿಧಾನ ಪರಿಷತ್ತಿನ ಸದಸ್ಯರಾಗಿ ಸೇವೆ ಸಲ್ಲಿಸಿದ ಈ ಹಿರಿಯ ಜೀವಿ, ಸಮಾಜ ಸುಧಾರಕರಾಗಿ, ದೇವದಾಸಿಯರ ಪುನರ್‌ವಸತಿ, ಮದ್ಯಪಾನ ಮತ್ತು ಗೋಹತ್ಯೆ ನಿಷೇದಗಳಂತಹ ಕಳಂಕಕಾರಕ ಚಟುವಟಿಕೆಗಳ ನಿವಾರಣೆಗಾಗಿ ಅವಿರತವಾಗಿ ಶ್ರಮಿಸಿದ ಕೀರ್ತಿಗೆ ಪಾತ್ರರು. ರಾಜ್ಯಾಂಗ ಸಭೆ ಹಾಗೂ

ಬೆಂಗಳೂರು ಜಿಲ್ಲಾ ಮಂಡಳಿಯ ಸದಸ್ಯರಾಗಿಯೂ ಸೇವೆ ಸಲ್ಲಿಸಿದ್ದ ಶ್ರೀ ಹನುಮಂತಯ್ಯನವರು ಮೈಸೂರಿನ ಶ್ರೀಮನ್ಮಹಾರಾಜರಿಂದ 'ಲೋಕಸೇವಾನಿರತ' ಬಿರುದನ್ನು ಸಹ ಪಡೆದಿದ್ದರು.

5. ಕನ್ನಡ ಸಾರಸತ್ವ ಲೋಕದ ದಿಗ್ಗಜ, ಶ್ರೀ ವಿನಾಯಕ ಕೃಷ್ಣ ಗೋಕಾಕರು ಏಪ್ರಿಲ್ 4ರಂದು ಮುಂಬೈನಲ್ಲಿ ನಿಧನರಾದರು. ಈ ಹಿರಿಯ ಕನ್ನಡ ಸಾಹಿತ್ಯ ತಪಸ್ವಿ, ಕನ್ನಡ ಭಾಷೆ, ಸಂಸ್ಕೃತಿ ಹಾಗೂ ಸಾಹಿತ್ಯದ ಸರ್ವತೋಮುಖದ ಪ್ರಗತಿಗಾಗಿ ಅವಿರತ ಶ್ರಮಿಸಿದವರು. ಶಿಕ್ಷಣ ಕ್ಷೇತ್ರಕ್ಕೆ ಮರೆಯಲಾಗದ ಕಾಣಿಕೆಯನ್ನು ಸಲ್ಲಿಸಿದವರು. ಸುಮಾರು 60ಕ್ಕೂ ಹೆಚ್ಚಿನ ಮಹತ್ವದ ಕೃತಿಗಳನ್ನು ರಚಿಸಿ, ಕನ್ನಡ ಸಾಹಿತ್ಯ ಕ್ಷೇತ್ರವನ್ನು ಶ್ರೀಮಂತಗೊಳಿಸಿದ ಧೀಮಂತರು ಶ್ರೀ ಗೋಕಾಕರು. 1945ರಲ್ಲಿ ಉಸ್ಮಾನಿಯಾ ವಿಶ್ವವಿದ್ಯಾಲಯದಲ್ಲಿ ಪ್ರಾಧ್ಯಾಪಕರಾಗಿ, ಧಾರವಾಡದ ಕರ್ನಾಟಕ ಕಾಲೇಜು ಹಾಗೂ ಕೊಲ್ಲಾಪುರದ ರಾಜಾರಾಂ ಕಾಲೇಜಿನ ಪ್ರಾಂಶುಪಾಲರಾಗಿ, ಹೈದ್ರಾಬಾದ್‌ನ ಕೇಂದ್ರೀಯ ಇಂಗ್ಲೀಷ್ ಸಂಸ್ಥೆಯ ನಿರ್ದೇಶಕರಾಗಿ, ಬೆಂಗಳೂರು ಹಾಗೂ ಶ್ರೀ ಸತ್ಯಸಾಯಿ ವಿಶ್ವವಿದ್ಯಾಲಯಗಳ ಕುಲಪತಿಗಳಾಗಿ, ಕೇಂದ್ರ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ, ಪ್ರತಿಷ್ಠಿತ ಜ್ಞಾನಪೀಠ ಪ್ರಶಸ್ತಿ ಆಯ್ಕೆ ಸಮಿತಿಯ ಅಧ್ಯಕ್ಷರಾಗಿಯೂ ಸಹ ಅಚ್ಚಳಿಯದ ಸೇವೆ ಸಲ್ಲಿಸಿ ಕೀರ್ತಿಶೇಷರಾದ ಈ ಮೇರು ಸದೃಶವ್ಯಕ್ತಿಗೆ ಜ್ಞಾನಪೀಠ ಪುರಸ್ಕಾರವೂ ಲಭಿಸಿದ್ದು ಆಕಸ್ಮಿಕವೇನಲ್ಲ.

6. ಹಿರಿಯ ಪತ್ರಕರ್ತ, ಕವಿ, ವಿಮರ್ಶಕ ಹಾಗೂ ಬಿ.ಡಿ. ಗೊಯಂಕ ಪ್ರಶಸ್ತಿ ವಿಜೇತ ಶ್ರೀ ಪಾ.ವೆಂ. ಆಚಾರ್ಯರು ಏಪ್ರಿಲ್ 5ರಂದು ಅಸ್ತಂಗತರಾದರು. ಕನ್ನಡದ ಹೆಸರಾಂತ ಮಾಸಿಕ ಕಸ್ತೂರಿಯ ಪ್ರಥಮ ಸಂಪಾದಕರಾಗಿ 'ಬಹುಶ್ರುತರು' ಎಂದೇ ಖ್ಯಾತಿ ಪಡೆದಿದ್ದ ಆಚಾರ್ಯರು ಕವಿಯಾಗಿ ಕಥೆಗಾರರಾಗಿ, ಹರಟೆಗಾರರಾಗಿ, ನಗೆಬರಹಗಾರರಾಗಿ ಕನ್ನಡ ಸಾಹಿತ್ಯ ಲೋಕಕ್ಕೆ ಗಣನೀಯ ಸೇವೆ ಸಲ್ಲಿಸಿದವರು.

7. ಆಸ್ಕರ್ ಪುರಸ್ಕಾರ ವಿಜೇತ ಹಾಗೂ ವಿಶ್ವದ ಅಗ್ರಮಾನ್ಯ ಚಲನಚಿತ್ರ ನಿರ್ದೇಶಕರಲ್ಲೊಬ್ಬರಾದ ಭಾರತ ರತ್ನ ಸತ್ಯಜಿತ್‌ರಾಯ್‌ರವರು ಏಪ್ರಿಲ್ 23ರಂದು ನಿಧನ ಹೊಂದಿದರು. ಭಾರತೀಯ ಚಿತ್ರ ಜಗತ್ತಿಗೆ ಹೊಸ ಆಯಾಮ ನೀಡಿದ ಈ ಮಹಾನ್ ವ್ಯಕ್ತಿ ಸಂಗೀತ, ಸಾಹಿತ್ಯ ಹಾಗೂ ರೇಖಾ ಚಿತ್ರಗಳ ಪ್ರಗತಿಗಾಗಿ ತಮ್ಮ ಬದುಕನ್ನೇ ಮುಡುಪಾಗಿಟ್ಟಿದ್ದರು. ಶ್ರೀ ರಾಯ್ ಅವರ ಅವಿಸ್ಮರಣೀಯ ಸೇವೆಯನ್ನು ಪುರಸ್ಕರಿಸಿದ ಕೇಂದ್ರ ಸರ್ಕಾರ ಅವರನ್ನು "ರಾಷ್ಟ್ರೀಯ ಪ್ರಧ್ಯಾಪಕ"ರನ್ನಾಗಿ ನೇಮಿಸಿ ತನ್ನನ್ನೇ ಗೌರವಿಸಿಕೊಂಡಿತ್ತು.

8. ರಾಷ್ಟ್ರದ ಸಮತಾವಾದಿ ಚಳುವಳಿಯ ಮಹಾನ್ ನಾಯಕ, ಸ್ಥಾಪಕ ಸದಸ್ಯ ರಾಜ್ಯ ಸಭೆಯ ಮಾಜಿ ಸದಸ್ಯ, ಸಂಸದೀಯ ಪಟು ಶ್ರೀ ಬಸವಪುನ್ನಯ್ಯನವರು ಏಪ್ರಿಲ್, 12ರಂದು ನಿಧನರಾದರು. ಶ್ರೀಯುತರು ಮಾರ್ಕ್ಸ್‌ವಾದಿ ಪಕ್ಷದ ಪೊಲಿಟ್‌ಬ್ಯೂರೋದ ಅತ್ಯಂತ ಹಿರಿಯ ಸದಸ್ಯರಾಗಿ, ತಮ್ಮ ಪಕ್ಷದ ಪತ್ರಿಕೆ ಪೀಪಲ್ಸ್ ಡೆಮಾಕ್ರಸಿಯ 'ಸಂಪಾದಕರಾಗಿ ವೈವಿಧ್ಯಮಯ ಸೇವೆ ಸಲ್ಲಿಸಿದ್ದ ಶ್ರೀಯುತರು ಸಮತಾವಾದಿ ತತ್ವ ಚಿಂತಕರೂ ಆಗಿದ್ದರು.

ಈ ಎಲ್ಲರ ನಿಧನದಿಂದ ನಮ್ಮ ರಾಷ್ಟ್ರದ ಸಾರ್ವಜನಿಕ ಜೀವನ ಬಡವಾಗಿದೆ. ಅವರಿಗೆ ಈ ಸಭೆ ಶ್ರದ್ಧಾಂಜಲಿಯನ್ನು ಅರ್ಪಿಸಬೇಕೆಂಬ ನಿರ್ಣಯವನ್ನು ಸಭೆಯ ಮುಂದೆ ಇಡುತ್ತಿದ್ದೇನೆ.

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು) : ಮಾನ್ಯ ಸಭಾಧ್ಯಕ್ಷರೆ, ಈ ನಿರ್ಣಯಕ್ಕೆ ಸಂಪೂರ್ಣವಾಗಿ ಸದನದ ಪರವಾಗಿ ಮತ್ತು ವೈಯಕ್ತಿಕವಾಗಿ ಕೂಡ ನನ್ನ ಬೆಂಬಲವನ್ನು ಸೂಚಿಸುತ್ತಾ ಎರಡು ಮಾತುಗಳನ್ನು ಆಡುವುದಕ್ಕೆ ತಮ್ಮ ಅನುಮತಿಯನ್ನು ಕೇಳುತ್ತಿದ್ದೇನೆ. ಡಾ: ಎಸ್.ಎಸ್. ಹುಂಬರವಾಡಿಯವರು, ಕಲ್ಯಾಣರಾವ್ ಮೊಳಕೇರಿಯವರು ಈ ಸದನದ ಮಾಜಿ ಸದಸ್ಯರು. ಒಂದೇ ದಿನ ಇವರಿಬ್ಬರೂ ಅಪಘಾತದಲ್ಲಿ ನಿಧನರಾಗಿರತಕ್ಕ ವಿಷಯ ನಮಗೆ ದಿಗ್ಭ್ರಮೆಯನ್ನು ಉಂಟುಮಾಡಿತು. ನಾನು ಬೀದರ್ ಜಿಲ್ಲೆಯಲ್ಲಿರತಕ್ಕ ಕಾಲದಲ್ಲಿ ಅವರ ಮನೆಗೆ ಹೋಗಿ ಅವರನ್ನು ಭೇಟಿ ಮಾಡುವುದಕ್ಕೆ ಆಗಲಿಲ್ಲ. ಅದಕ್ಕಾಗಿ ಕ್ಷಮೆ ಕೇಳುತ್ತಿದ್ದೇನೆ. ಆದರೆ ಶ್ರೀಮಾನ್ ಹುಂಬರವಾಡಿಯವರ ಮನೆಗೆ ನಾನು ಹೋಗಿದ್ದೆ. ಅವರ ಜೊತೆಗೆ ಬೇರೆಯವರು ಅಂದರೆ ಈ ಮನೆಯ ಸದಸ್ಯರೆಲ್ಲದೇ ಇದ್ದಂಥ ಇನ್ನೂ ಕೂಡ ಇಬ್ಬರು ಮಹನೀಯರು ತೀರಿಕೊಂಡಿರುವವರು. ಮತ್ತೊಬ್ಬ

ಡಾಕ್ಟರು ಮುಳುಗುಂದ ಎಂಬುವವರು, ಮತ್ತೊಬ್ಬರ ಹೆಸರನ್ನು ನಾನು ಮರೆತಿದ್ದೇನೆ. ಅವರ ಮನೆಗೂ ಗದಗ್‌ನಲ್ಲಿ ನಾನು ಹೋಗಿ ಬಂದೆ. ಹುಂಬರವಾಡಿಯವರ ಮನೆಗೆ ಬೆಳಗಾಂನಲ್ಲಿ ಹೋಗಿ ಅವರ ತಾಯಿಯವರನ್ನು ಕೂಡ ನಾನು ಮಾತನಾಡಿಸಿ ಬಂದೆ. ಅತ್ಯಂತ ಸ್ನೇಹಕ್ಕೆ ಹೆಸರಾಗಿರತಕ್ಕವರು ಶ್ರೀಮಾನ್ ಹುಂಬರವಾಡಿಯವರು ಹಾಗೂ ಮೊಳಕೇರಿಯವರು. ನಾವೆಲ್ಲಾ ಯಾವುದೇ ಪಕ್ಷದಲ್ಲಿರಲ್ಲಿ ಮಿತ್ರರಾಗಿ ಒಟ್ಟೊಟ್ಟಿಗೆ ಕೆಲಸ ಮಾಡಿರತಕ್ಕ ಸಂದರ್ಭಗಳು, ನನ್ನ ನೆನಪಿಗೆ ಬರುತ್ತಿದೆ. ಈ ವಯಸ್ಸಿನಲ್ಲಿ ಅಕಾಲಿಕ ಮರಣ ಅವರನ್ನು ಸೆಳೆಯಬಾರದಾಗಿತ್ತು ಎನ್ನತಕ್ಕದ್ದು ಸಹಜವಾಗಿ ನಮ್ಮ ಮನಸ್ಸಿನಲ್ಲಿ ಮೂಡಿಬರತಕ್ಕಂಥ ವಿಚಾರ.

ಈ ದುಃಖವನ್ನು ತಡೆದುಕೊಳ್ಳತಕ್ಕ ಶಕ್ತಿ ಇವತ್ತು ಅವರ ಮನೆಯವರಿಗೆ ಬೇಕಾಗಿದೆ. ಅವರು ಇನ್ನೂ ಕೂಡ ನಮ್ಮ ಜೊತೆ ಇದ್ದು ಮತ್ತೆ ಈ ಸದನಕ್ಕೆ ಯಾವುದೇ ಪಕ್ಷದ ವತಿಯಿಂದ ಆಯ್ಕೆಯಾಗಿ ಬಂದು ಕರ್ನಾಟಕ ರಾಜ್ಯದ ಜನತೆಯ ಸೇವೆಯನ್ನು ಹಾಗೂ ಈ ದೇಶಕ್ಕೆ ಸೇವೆಯನ್ನು ಸಲ್ಲಿಸತಕ್ಕ ಅನೇಕ ಶುಭ ಘಳಿಗೆಗಳು ಅವರ ಮುಂದೆ ಇದ್ದವು. ಆದರೆ, ಅವರ ಈ ಅಗಲಿಕೆ ಇವತ್ತು ಅದನ್ನು ಮಾಡುವುದಕ್ಕೆ ವಿಧಿ ಬಿಟ್ಟಿಲ್ಲವೆಂದು ಹೇಳಬಹುದು. ಅದೇ ರೀತಿ ಅಗ್ನಿಹೋತ್ರಿಯವರು. ಅವರು ದಿ: ದೇವರಾಜ ಅರಸ್‌ರವರ ಕಾಲದಲ್ಲಿದ್ದರು. ನನಗೆ ನೆನಪು ಇರುವಂತೆ ಅವರ ಸ್ನೇಹಪರ ಎಷ್ಟಿತ್ತೆಂದರೆ ಕೆಲವು ಸಾರಿ ಹೊಟ್ಟೆ ನೋವು ಆಗುವಷ್ಟು ನಗಿಸುವ ಸರ್ವಶಕ್ತಿ ಅವರಿಗೆ ಇತ್ತು. ಅವರು ನಿಧನರಾದ ಮೇಲೆ ನಾನು ಧಾರವಾಡಕ್ಕೆ ಹೋಗಿ ಅವರ ಕುಟುಂಬ ವರ್ಗದವರನ್ನು ಹಾಗೂ ಅವರ ಅಣ್ಣ–ತಮ್ಮಂದಿರನ್ನು ಮಾತನಾಡಿಸಿಕೊಂಡು ಬಂದಿದ್ದೇನೆ. ಅವರು ನಮ್ಮ ಜೊತೆಯಲ್ಲಿ ಇದ್ದವರು. ಮಾನ್ಯ ಸಭಾಧ್ಯಕ್ಷರೇ, ತಾವು ಹೇಳಿದ ಹಾಗೆ ಶ್ರೀಮಾನ್ ವೀರೇಂದ್ರ ಪಾಟೀಲ್‌ಜಿಯವರು ಮೊದಲ ಸಾರಿ ಮುಖ್ಯಮಂತ್ರಿಗಳಾಗಿದ್ದಾಗ ಇವರು ಸಚೇತಕರಾಗಿದ್ದರು. ನಂತರ, ದೇವರಾಜ ಅರಸ್‌ರವರ ಕಾಲದಲ್ಲಿ ಒಂದು ಮಂಡಳಿಯ ಸದಸ್ಯರಾಗಿ ಸೇವೆಯನ್ನು ಸಲ್ಲಿಸಿದ್ದಾರೆ. ಅವರ ಗಾಯನ ನಗೆ ಬುಗ್ಗೆಗಳು, ನುಡಿಮುತ್ತುಗಳು ಎಂತಹವರನ್ನೂ ಆದರೂ ಕೂಡ ಅಷ್ಟೇ ಅಲ್ಲ ಬಹಿರಂಗ ಸಭೆಗಳಲ್ಲೂ ಕೂಡ ಜನರನ್ನು ಬಹಳ ನಕ್ಕು ನಲಿಸುತ್ತಿದವರು. ಜೊತೆಗೆ ಅಷ್ಟೇ ಪ್ರಾಮುಖ್ಯವಾಗಿ ವಿಷಯದ ಬಗ್ಗೆ ಇರತಕ್ಕ ಪ್ರಾಮುಖ್ಯತೆಯನ್ನು ಅವರು ಎಂದೂ ಕೂಡ ಬದಿಗೊತ್ತಿರತಕ್ಕವರಲ್ಲ. ಅವರು ಸಹೃದಯಿ ಎನ್ನತಕ್ಕ ಮಾತನ್ನು ಪದೇ ಪದೇ ಪಡೆದಿರತಕ್ಕವರಾಗಿದ್ದರು. ಸ್ನೇಹಮಯಿ ಎನ್ನುವ ಹೆಸರು ಪಡೆದಿದ್ದ ಎಸ್.ವಿ. ಅಗ್ನಿಹೋತ್ರಿಯವರ ಆರೋಗ್ಯ ಹಲವು ಕಾಲದಿಂದ ಸರಿಯಿರಲಿಲ್ಲ. ಅವರ ಅಕಾಲಿಕ ಮರಣ ಅಪರೂಪದ ಒಬ್ಬ ವ್ಯಕ್ತಿಯನ್ನು ನಮ್ಮಿಂದ ಅಗಲಿಸಿದೆಯೆಂದು ನಾನು ಈ ಸಂದರ್ಭದಲ್ಲಿ ಹೇಳಬಹುದೆಂದು ನನ್ನ ಅನಿಸಿಕೆ. ಅದೇ ರೀತಿಯಾಗಿ ಎಂ. ಹನುಮಂತಯ್ಯನವರು, 'ಲೋಕಸೇವಾ ನಿರತರು' ಎಂದು ಇಲ್ಲಿ ಬೋರ್ಡ್ ಗೀರ್ಡ್ ಎಲ್ಲಾ ಇದೆ. ಅವರೇ ಇರಬಹುದೆಂದು ನನ್ನ ಭಾವನೆ. ನಮ್ಮ ಶಾಸನಸಭಾ ಸದಸ್ಯರಾದ ಅಂಜನಮೂರ್ತಿಯವರು ನೆಲಮಂಗಲ ಕ್ಷೇತ್ರ, ಅವರ ತಂದೆ 115 ವರ್ಷಗಳ ಕಾಲ ಸುದೀರ್ಘ ಮತ್ತು ಸಾಫಲ್ಯ ಜೀವನವನ್ನು ನಡೆಸಿರತಕ್ಕವರು. ಸ್ವಾತಂತ್ರ್ಯಪೂರ್ವ ಹಾಗೂ ನಂತರದ ರಾಜಕೀಯ ಕ್ಷೇತ್ರದಲ್ಲೂ ಕೂಡ ಇದ್ದು ಅಪಾರ ಅನುಭವ ಪಡೆದಿರತಕ್ಕಂಥ ಶ್ರೀಮಾನ್ ಹನುಮಂತಯ್ಯನವರು ನಮ್ಮನ್ನು ಅಗಲಿದ್ದಾರೆ. ಯಾರೇ ಆದರೂ ಕೂಡ ಒಂದು ದಿನ ಅಗಲಲೇ ಬೇಕು. ಇವರೂ ಅಗಲಿದ್ದಾರೆ. ಸುಧೀರ್ಘ ಜೀವನ ಅವರದ್ದು ಏನಿದೆ, ಅವರ ಬಾಳ್ವೆ ಏನಿದೆ, ಅದು ಮೆಚ್ಚತಕ್ಕದ್ದು. ಲೋಕಸೇವಾ ನಿರತರು ಎನ್ನತಕ್ಕ ಬಿರುದನ್ನು ಶ್ರೀಮಾನ್ ಮಹಾರಾಜರು ಇದ್ದ ಆಗಿನ ಕಾಲದಲ್ಲಿ ಸ್ವಾತಂತ್ರ್ಯಪೂರ್ವ ಕಾಲದಲ್ಲಿ ಪಡೆದಿರತಕ್ಕಂಥವರು ಗೋಹತ್ಯೆ ನಿಷೇಧ, ಹಲವಾರು ವಿಚಾರದಲ್ಲಿ ಪ್ರಾಮುಖ್ಯ ಪಾತ್ರ ವಹಿಸಿದ್ದರು. ಅವರ ನೆನಪು ಯಾವ ವಿಚಾರ ಒಬ್ಬ ವ್ಯಕ್ತಿಯಲ್ಲಿ ಇದ್ದು, ಹೋರಾಟ ಮಾಡಬಲ್ಲ ಒಂದು ಫಲ ಇರುತ್ತದೆ ಅದಕ್ಕೆ ಇದು ಇಂಬು ಕೊಡುತ್ತದೆ. ಆ ಒಂದು ಶಕ್ತಿಯನ್ನು, ಒಂದು ವಿಚಾರಧಾರೆಯನ್ನು ಇಟ್ಟುಕೊಂಡಿರತಕ್ಕವರಿಗೆ ಅದು ಕೂಡುತ್ತದೆ. ಇನ್ನು ಗೋಕಾಕರ ಬಗ್ಗೆ ಹೇಳತಕ್ಕ ಅವಶ್ಯಕತೆ ಇಲ್ಲ. ಅವರು ಜ್ಞಾನಪೀಠ ಪ್ರಶಸ್ತಿ ವಿಜೇತರು. ಕನ್ನಡ ಸಾರಸ್ವತ ಲೋಕದ ಸಾರ್ವಭೌಮರುಗಳಲ್ಲಿ ಅತ್ಯಂತ ಹಿರಿಯರುಗಳಲ್ಲಿ ಅವರು ಒಬ್ಬರಾಗಿದ್ದರು. ಕರ್ನಾಟಕದಲ್ಲಿ ಹಲವಾರು ಮುಖ್ಯಗಳಲ್ಲಿ ಇವರ ಸೇವೆಯನ್ನು

ಸಲ್ಲಿಸಿರತಕ್ಕವರಾಗಿದ್ದರು. ಅವರ ನಿಧನ ಕನ್ನಡ ಸಾಹಿತ್ಯ ಕ್ಷೇತ್ರಕ್ಕೆ ಮತ್ತು ಭಾರತೀಯ ಮಟ್ಟದ ಈ ಸಾಹಿತ್ಯ ಕ್ಷೇತ್ರಕ್ಕೆ ಕೂಡಾ ದೊಡ್ಡ ನಷ್ಟ ಎನ್ನತಕ್ಕ ಮಾತನ್ನು ಪುನಃ ಹೇಳತಕ್ಕ ಅವಶ್ಯಕತೆ ಇದೆ. ಎಂದು ನಾನು ಭಾವಿಸಿಲ್ಲ. ಇಂತಹ ದಿಗ್ಗಜರುಗಳಲ್ಲಿ ಒಬ್ಬರಾಗಿರತಕ್ಕ ವಿ.ಕೃ. ಗೋಕಾಕ್‌ರವರ ನಿಧನ ಬಹಳ ದೊಡ್ಡ ನಷ್ಟ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ತಿಳಿಸುತ್ತೇನೆ. ಮತ್ತು ಇವರಲ್ಲದೇ ಪಾ.ವೆಂ. ಆಚಾರ್ಯರು ಪತ್ರಿಕಾ ರಂಗದಲ್ಲಿ ಇದ್ದು ದೊಡ್ಡ ಹೋರಾಟವನ್ನು ಕೂಡ ಕತೆಗಾರರಾಗಿ, ಮತ್ತು ಹರೆಟೆಗಾರರಾಗಿ ಸೇವೆಯನ್ನು ಮಾಡಿದ್ದಾರೆ. ಲಂಗುಲಾಚಾರ್ಯರು ಎಂದು ಅವರ ನಗೆಬರಹಗಳು ಮೆಚ್ಚುಗೆ ಪಡೆದಿವೆ. ಅವರು ಕನ್ನಡ ಸಾಹಿತ್ಯ ಲೋಕಕ್ಕೆ ಗಣನೀಯ ಸೇವೆಯನ್ನು ಸಲ್ಲಿಸಿದವರು. ಹಾಗೆಯೇ ಪ್ರಪಂಚದಲ್ಲಿಯೇ ಅತ್ಯುತ್ತಮ ಚಲನಚಿತ್ರ ನಿರ್ದೇಶಕರುಗಳಲ್ಲಿ ಸತ್ಯಜಿತ್‌ರೇ ಅವರು ಒಬ್ಬರಾಗಿದ್ದರು.

ಶ್ರೀಮಾನ್ ಸತ್ಯಜಿತ್‌ರೇ ಅವರ ನಿಧನ ಪ್ರಪಂಚದಲ್ಲಿಯೇ ಆ ರಂಗಕ್ಕೆ ಆದ ದೊಡ್ಡ ನಷ್ಟ ಅಂದುಕೊಂಡಿದ್ದೇನೆ. ಆ ಮಾತನ್ನು ಎಲ್ಲರೂ ಒಪ್ಪಿಕೊಳ್ಳುತ್ತಾರೆ. ಕೊನೆಯವರೆಗೂ ಆ ರಂಗಕ್ಕೆ ಅವರ ಬಹುಮುಖ ಸೇವೆ ಚಿರಸ್ಮರಣೀಯವಾಗಿ ನಿಲ್ಲತಕ್ಕ ಮಾತು. ಆ ಕ್ಷೇತ್ರಕ್ಕೆ ಹೊಸ ಆಯಾಮವನ್ನು ತಂದುಕೊಟ್ಟಿದ್ದರು ಎನ್ನತಕ್ಕ ಮಾತನ್ನು ನಾವೆಲ್ಲಾ ಕೇಳಿದ್ದೇವೆ. ಅವರ ಸೇವೆಯನ್ನು ಪುರಸ್ಕರಿಸಿ ರಾಷ್ಟ್ರೀಯ ಪ್ರಶಸ್ತಿಯನ್ನು ಕೇಂದ್ರ ಸರ್ಕಾರ ಕೊಟ್ಟಿದೆ. ಅವರಿಗೆ ಕೊಟ್ಟಿರತಕ್ಕ ಗೌರವ ಅವರ ಕ್ಷೇತ್ರಕ್ಕೆ ಸಂದಾಯ ಮಾಡಿರತಕ್ಕ ಗೌರವ ಎನ್ನತಕ್ಕ ಮಾತನ್ನು ಹೇಳುತ್ತೇನೆ. ಅವರಿಗೆ ಆಸ್ಕರ್ ಅವಾರ್ಡ್ ಇತ್ಯಾದಿ ಅಂತರರಾಷ್ಟ್ರೀಯ ಮಟ್ಟದಲ್ಲಿ ಕೂಡ ಪ್ರಶಸ್ತಿಗಳು ಸಿಕ್ಕಿವೆ. ನಷ್ಟವೆಂದು ಅದಕ್ಕೇ ನಾನು ಹೇಳಿದ್ದ ಪ್ರಪಂಚದಲ್ಲಿಯೇ ಈ ಕ್ಷೇತ್ರಕ್ಕೆ ದೊಡ್ಡ ನಷ್ಟವೆಂದು ಹೇಳಿದ್ದೇನೆ. ರಾಜಕೀಯ ಮಹಾಪಟು ದಿಗ್ಗಜ ಶ್ರೀಮಾನ್ ಬಸವಪುನ್ನಯ್ಯನವರು ಅವರು ಏಪ್ರಿಲ್ ತಿಂಗಳಿನಲ್ಲಿ ತೀರಿಕೊಂಡಿದ್ದಾರೆ. ಎಂಥೆಂಥಹ ವ್ಯಕ್ತಿಗಳು, ಪಂಡಿತ ಜವಾಹರಲಾಲ್ ನೆಹರೂರವರ ಸಮಕಾಲೀನರು, ಜಯಪ್ರಕಾಶ್‌ನಾರಾಯಣ್, ರಾಮಮನೋಹರ ಲೋಹಿಯಾ ಅವರ ಜೊತೆಯಲ್ಲಿದ್ದಂತಹ ಬಸವಪುನ್ನಯ್ಯ ಅನಂತರ ಬಂದಂತಹ ಸಂಸದೀಯ ಪಟುಗಳು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ಹಿಸರಿನಲ್ಲಿ ಬಂದಂತಹ ವ್ಯಕ್ತಿಗಳು ಅವರ ಕಾಲದಲ್ಲಿ ಬಂದಂತಹ ವ್ಯಕ್ತಿಗಳನ್ನು ನಾವು ನೆನಸಿಕೊಳ್ಳಬೇಕು. ಅಂತಹ ರಾಜಕಾರಣಿಗಳ ಗುಂಪಿಗೆ ಸೇರಿರತಕ್ಕವರು, ಅವಿಶ್ರಾಂತವಾಗಿ ಒಂದು ಚಿಂತನೆಗೆ ಒಂದು ನೀತಿಗೆ ಒಂದು ಗುರಿಗೆ ಹೋರಾಟ ಮಾಡಿರತಕ್ಕ ರಾಜಕೀಯ ದಿಗ್ಗಜರಲ್ಲಿ ಬಸವಪುನ್ನಯ್ಯನವರು ಕೂಡ ಒಬ್ಬರು. ತಮ್ಮ ಚಿಂತನೆಗೆ ತಿಲಾಂಜಲಿಯನ್ನು ಕೊನೆಯವರೆಗೂ ಕೂಡ ಕೊಡದೆ ಅದರಲ್ಲಿಯೇ ಅವಿಶ್ರಾಂತವಾಗಿ ದುಡಿದು ಅಂತಿಮ ತೆರೆಯನ್ನು ಎಳೆದಿರತಕ್ಕ ಮಹಾನ್ ರಾಜಕಾರಣಿಗಳು ಮೇಧಾವಿಗಳು ಇವರ ಚಿಂತನೆ, ಹೋರಾಟ, ನಡೆದು ಬರದಿರತಕ್ಕ ದಾರಿ ಅವರು ಇಟ್ಟಿರತಕ್ಕ ಹೆಜ್ಜೆಗಳು ಏನಿದ್ದಾವೆ, ಅವು ಇಂದಿನ ಮತ್ತು ಭವಿಷ್ಯದ ಏಳಿಗೆಗೆ ಇವು ಮಾರ್ಗಸೂಚಿ ಮತ್ತು ದಾರಿದೀಪ ಎನ್ನತಕ್ಕ ಮಾತನ್ನು ನಾನು ಈ ಸಂದರ್ಭದಲ್ಲಿ ಹೇಳುತ್ತಾ ಇವರೆಲ್ಲರ ಆತ್ಮಗಳಿಗೆ ಚಿರಶಾಂತಿಯನ್ನು ಈ ಸಂದರ್ಭದಲ್ಲಿ ಹೋರುವುದಲ್ಲದೆ ಗೌರವವನ್ನು ಇದೇ ಸಂದರ್ಭದಲ್ಲಿ ನಾವೆಲ್ಲಾ ಸೇರಿ ಸೂಚನೆ ಮಾಡುವುದರ ಜೊತೆಗೆ ಅವರ ಕುಟುಂಬವರ್ಗದವರಿಗೆ ಅವರ ನಿಧನದಿಂದ ಉಂಟಾಗಿರುವ ದುಃಖವನ್ನು ತಡೆಯುವ ಶಕ್ತಿಯನ್ನು ದೇವರು ಕೊಡಲಿಯೆಂದು ಹೇಳಿ ಈ ನಿರ್ಣಯಕ್ಕೆ ಸಂಪೂರ್ಣ ಬೆಂಬಲವನ್ನು ಕೂಡ ನೀಡಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಡಿ.ಬಿ. ಚಂದ್ರೇಗೌಡ : (ವಿರೋಧ ಪಕ್ಷದ ನಾಯಕರು) ಮಾನ್ಯ ಅಧ್ಯಕ್ಷರೆ, ತಾವು ಮಂಡಿಸಿರತಕ್ಕ ಸಂತಾಪ ಸೂಚಕ ನಿರ್ಣಯಕ್ಕೆ ನನ್ನ ಪೂರ್ಣ ಬೆಂಬಲವನ್ನು ವ್ಯಕ್ತ ಮಾಡುತ್ತಾ ತಾವು ಮತ್ತು ಸಭಾನಾಯಕರು ಅಭಿವ್ಯಕ್ತ ಮಾಡಿದಂತಹ ಅಭಿಪ್ರಾಯಕ್ಕೆ ದ್ವನಿಗೂಡಿಸುತ್ತಾ ಈ ಶಾಸನಸಭೆಯ ಸದಸ್ಯರಾಗಿದ್ದ ಡಾ. ಎನ್.ಎಸ್. ಹುಂಬರವಾಡಿ ಮತ್ತು ಕಲ್ಯಾಣರಾವ್ ಮೊಳಕೇರಿಯವರು ಅಪಘಾತದಲ್ಲಿ ಮರಣ ಹೊಂದಿದ್ದು, ನಮ್ಮ ಅಜೇಜ್‌ಸೇಠ್ ಸಾಹೇಬರು ಹೇಳಬೇಕು, ಅಂತಹ ಒಂದು ವ್ಯವಸ್ಥೆ ಇದೆ. ನಮ್ಮ ರಾಷ್ಟ್ರೀಯ ಹೆದ್ದಾರಿಯಲ್ಲಿ ಅಂತಹ ಒಂದು ಭಯಾನಕವಾದಂತಹ ದುರ್ಘಟನೆ ನಡೆಯುತ್ತಿದೆ ಎಂಬುದನ್ನು ತಾವು ಗಂಭೀರವಾಗಿ

ಗಮನಿಸಬೇಕೆಂದು ಹೇಳುತ್ತೇನೆ. ಅತ್ಯೀಯ ಗೆಳೆಯರು ನಮ್ಮೊಂದಿಗೆ ಬಹಳ ಕಾಲ ಕೆಲಸ ಮಾಡಿದವರು ಹಾಗೂ ನನ್ನ ಸ್ನೇಹಿತರು. ಎಲ್ಲಕ್ಕಿಂತ ಮಿಗಿಲಾಗಿ ಕಲ್ಯಾಣರಾವ್ ಮೊಳಕೇರಿಯವರು ಪ್ರಾಮಾಣಿಕರು. ಅವರು ಪ್ರಾಮಾಣಿಕತೆಗೆ ಮತ್ತೊಂದು ಹೆಸರು. ಅವರು ಆ ದಿವಸ ಡಾ. ಹುಂಬರವಾಡಿಯವರ ಹತ್ತಿರ ಬಂದಿದ್ದು, ತಮ್ಮ ಮನೆ ಹರಾಜಿಗೆ ಬಂದಿದೆ ಏನಾದರೂ ಹಣ ಸಹಾಯ ಮಾಡಿಯೆಂದು ಕೇಳುವುದಕ್ಕೆ ಬಂದಿದ್ದರು ಎಂದು ತಿಳಿದಿದ್ದೇನೆ. ಇಂತಹ ಪರಿಸ್ಥಿತಿಯಲ್ಲಿ ಈ ಸಭೆಯ ಸದಸ್ಯರಾಗಿ ಕೆಲಸ ಮಾಡಿದಂತಹವರ ಸ್ಥಿತಿಯಾದರೆ, ಇನ್ನು ನಮ್ಮ ಸಾರ್ವಜನಿಕ ಜೀವನದಲ್ಲಿ ಇಂತಹ ಪ್ರಾಮಾಣಿಕರೂ ಇದ್ದಾರೆ ಎನ್ನುವುದಕ್ಕೆ ಸಾಕ್ಷಿಯಾಗುತ್ತದೆ. ನಾನು ಮಾನ್ಯ ಮುಖ್ಯಮಂತ್ರಿಯವರಲ್ಲಿ ಪ್ರಾರ್ಥನೆ ಮಾಡುತ್ತಿದ್ದೇನೆ, ಮತ್ತು ತಮ್ಮಲ್ಲೂ ಪ್ರಾರ್ಥನೆ ಮಾಡುತ್ತೇನೆ, ಏನೆಂದರೆ, ವಿಶೇಷವಾಗಿ ಶ್ರೀ ಕಲ್ಯಾಣರಾವ್ ಮೊಳಕೇರಿ ಅವರ ಕುಟುಂಬಕ್ಕೆ ಸಾಧ್ಯವಾದ ಎಲ್ಲ ಸಹಾಯವನ್ನು ಮಾಡುವುದಕ್ಕೆ ತಾವು ಪ್ರಯತ್ನ ಮಾಡಬೇಕು. ಇದಕ್ಕಾಗಿ ಒಂದು ಕಾಮನ್‌ಫಂಡ್ ಅನ್ನು ಮಾಡಬೇಕೆಂದು ತಾವು ಅಲೋಚನೆಯನ್ನು ಮಾಡಿದ್ದೀರಿ. ಅದರಲ್ಲೂ ಏನಾದರೂ ಸಹಾಯ ಮಾಡುವುದಕ್ಕೆ ಪ್ರಯತ್ನ ಮಾಡಬೇಕೆಂದು ಮನವಿ ಮಾಡಿಕೊಳ್ಳುತ್ತೇನೆ.

ಇನ್ನು ಶ್ರೀಮಾನ್ ಅಗ್ನಿಹೋತ್ರಿಯವರ, ನೇರವಾದ ನಿಕಟವಾದ ಸಂಬಂಧ ನನಗೆ 1982ರಲ್ಲಿ ರೈತರ ಚಳುವಳಿ ಸಂದರ್ಭದಲ್ಲಿ ಆಯಿತು. ಆಗಿನ ಸರ್ಕಾರ ಸುಮಾರು 139 ರೈತರನ್ನು ಗುಂಡುಹಾರಿಸಿ ಕೊಂದಂಥ ಕಾಲದಲ್ಲಿ ನಾನು ಮೇಲ್ಮನೆಯಲ್ಲಿ ವಿರೋಧಪಕ್ಷದ ನಾಯಕನಾಗಿದ್ದಾಗ, ಒಂದು ರೈತ ಜಾಥಾವನ್ನು ಹಮ್ಮಿಕೊಂಡು ನವಲಗುಂದ, ನರಗುಂದದಿಂದ ಸುಮಾರು 605 ಕಿಲೋಮೀಟರ್ ದೂರದ ಮಾರ್ಗವನ್ನು ಆ ವಯಸ್ಸಿನಲ್ಲಿ ನಡೆದುಕೊಂಡು ಬಂದಂಥ ಒಬ್ಬ ಧೀಮಂತ ವ್ಯಕ್ತಿಯಾಗಿದ್ದರು ಅವರು. ಬದುಕನ್ನು ಎಂದೂ ಅವರು ತಿರುಗಿ ನೋಡಿದವರಲ್ಲ. ಹಾಸ್ಯ ಪ್ರವೃತ್ತಿ ಅವರ ಬದುಕಿನ ಮತ್ತೊಂದು ಜೀವನ ಕ್ರಮವಾಗಿತ್ತು. ನಾನು ಅವರ ಶವಸಂಸ್ಕಾರಕ್ಕೆ ಹೋಗಿದ್ದೆ. ಅವರ ಬಗ್ಗೆ ಸ್ವಲ್ಪ ಗೊತ್ತಾದರೂ ಸಾಕು, ನೆನಪು ಚಿರಸ್ಥಾಯಿಯಾಗಿ ಉಳಿಯತಕ್ಕಂಥ ಪ್ರಭಾವಿ ವ್ಯಕ್ತಿತ್ವ ಅವರದಾಗಿತ್ತು. ಹಾಗೆಯೇ ಶ್ರೀ ಹನುಮಂತಯ್ಯನವರ ಬಗ್ಗೆ ನನಗೆ ಹೆಚ್ಚು ತಿಳಿಯಲಿಲ್ಲ. ಆದರೆ ಇಷ್ಟು ದೀರ್ಘಕಾಲ ಬಾಳಿದ ವ್ಯಕ್ತಿಗಳು ಬಹಳ ಅಪರೂಪವೆಂದು ನಾನು ಹೇಳಿದರೆ ಇದನ್ನು ಯಾರೂ ಅಲ್ಲಗಳೆಯಲಾರರು ಎಂದು ಭಾವನೆ ಮಾಡುತ್ತೇನೆ. ಈ ರಾಜ್ಯದ, ಈ ನಾಡಿನ ಜನರಿಗಾಗಿ ತನ್ನ ಬದುಕನ್ನು ಮುಡುಪಾಗಿಟ್ಟು ಬಾಳಿದ ಧೀಮಂತ ನಾಯಕರು ಅವರಾಗಿದ್ದರು.

ಇನ್ನು ಶ್ರೀ ವಿನಾಯಕ ಕೃಷ್ಣ ಗೋಕಾಕರನ್ನಂತೂ ಕೇಳಿ ಅರಿಯದವರಿಲ್ಲ, ಕಂಡು ಅನುಭವಿಸದವರಿಲ್ಲ. ಒಂದು ಪೂರ್ಣ ವ್ಯಕ್ತಿತ್ವ ಹೊಂದಿದ್ದ ಅವರು ಕನ್ನಡ ನಾಡಿನ ಒಬ್ಬ ಶ್ರೇಷ್ಠ ಮಹಾನ್ ವ್ಯಕ್ತಿ. ಸಮರ್ಥ ಆಡಳಿತಗಾರ, ಕನ್ನಡ ಸಾರಸ್ವತ ಲೋಕದ ಸಾರ್ವಭೌಮರಾಗಿದ್ದರು. ಇಂಗ್ಲೀಷ್ ಭಾಷೆಯ ಮೇಲೆ ಪ್ರಭುತ್ವ ಅವರದ್ದಾಗಿತ್ತು. ಮತ್ತು ಉಳಿದ ಸಾಹಿತ್ಯಗಳ ಪರಿಚಯದಿಂದಾಗಿ ಅವರು ಒಬ್ಬ ಇಡೀ ರಾಷ್ಟ್ರ ಗುರುತಿಸಿ ಗೌರವಿಸಿದಂಥ ಒಬ್ಬ ಮಹಾನ್ ವ್ಯಕ್ತಿ ಆಗಿದ್ದರು. ಅವರ ಮರಣ ಕನ್ನಡ ನಾಡಿಗಷ್ಟೇ ಅಲ್ಲ, ಸಾರಸ್ವತ ಲೋಕಕ್ಕೆ ಅಷ್ಟೇ ಅಲ್ಲ, ಇಡೀ ಭಾರತಕ್ಕೆ ಆದಂಥ ಒಂದು ನಷ್ಟವೆಂದು ಹೇಳಿ ನಾನು ಭಾವನೆ ಮಾಡುತ್ತೇನೆ. ಅನೇಕ ಸಂದರ್ಭಗಳಲ್ಲಿ ಅನೇಕ ವಿಚಾರಗಳಲ್ಲ ಅವರ ಜೊತೆ ಕಳೆಯತಕ್ಕಂಥ ಸೌಭಾಗ್ಯ ನನಗೆ ಲಭಿಸಿತ್ತು. ಅವರ ನಿಧನ ನಮ್ಮೆಲ್ಲರಿಗೂ ಅತೀವ ದುಃಖವನ್ನು ಉಂಟುಮಾಡಿದೆ. ಇನ್ನು, ಪಾ.ವೆಂ. ಆಚಾರ್ಯರು 'ಲಂಗುಲಾಚಾರ್ಯ' ಎಂಬ ಅಂಕಿತದಿಂದ ಕನ್ನಡ ಸಾರಸ್ವತ ಲೋಕಕ್ಕೆ ಪತ್ರಿಕಾರಂಗಕ್ಕೆ, ವಿಶೇಷವಾಗಿ ಕನ್ನಡ ನಾಡಿನ ವಿವಿಧ ಹಂದರಗಳಲ್ಲಿ ಕೆಲಸ ಮಾಡಿ ದಿವಂಗತರಾಗಿದ್ದಾರೆ. ಮತ್ತು ನಮ್ಮ ಚಿತ್ರಲೋಕದ ಧೃವತಾರೆ, ಅಗ್ರಮಾನ್ಯ ನಿರ್ದೇಶಕರು, ಭಾರತರತ್ನ ಮತ್ತು ಜಗತ್ತಿನ ಶ್ರೇಷ್ಠ ಪುರಸ್ಕರವಾದಂಥ ಆಸ್ಕರ್ ಅವಾರ್ಡನ್ನು ಪಡೆದ ಶ್ರೀ ಸತ್ಯಜಿತ್‌ರೇ ಅವರು ಒಬ್ಬ ಧೀಮಂತ ವ್ಯಕ್ತಿಯಾಗಿದ್ದರು. ಭಾರತದ ಜನಜೀವನದಲ್ಲಿ ಅಚ್ಚಳಿಯದ ತಮ್ಮ ಪ್ರತಿಭೆಯನ್ನು ಅವರು ಬಿಟ್ಟುಹೋಗಿದ್ದಾರೆ. ಇವರ ಜೊತೆಗೆ ರಾಷ್ಟ್ರದ ಸಮತಾವಾದಿ ಚಳುವಳಿಯ ಮಹಾನಾಯಕರಾಗಿ, 'ಪೀಪಲ್ಸ್ ಡೆಮಾಕ್ರಸಿ' ಪತ್ರಿಕೆಯ ಸಂಪಾದಕರಾಗಿ ಭಾರತದ ರಾಜಕಾರಣಕ್ಕೆ ಸಮಾಜವಾದಿಯ

ದೊಡ್ಡ ಸ್ವರೂಪವನ್ನು ಕೊಟ್ಟಂಥ ದಿಗ್ಗಜ. ಹಿರಿಯ ನಾಯಕ ಬಸವಪುನ್ನಯ್ಯನವರು. ಇಂತಹ ಅನೇಕ ಮಹಾನ್ ನಾಯಕರುಗಳು ನಮ್ಮನ್ನು ಅಗಲಿದ್ದಾರೆ. ಇವರುಗಳ ಈ ಅಗಲುವಿಕೆಯಿಂದ ದೇಶಕ್ಕೆ ತುಂಬಲಾರದ ನಷ್ಟ ಉಂಟಾಗಿದೆ. ಇವುರುಗಳೆಲ್ಲ ಮಾಡಿದಂಥ ಸೇವೆಯನ್ನು ಸ್ಮರಣೆ ಮಾಡಿ, ನನ್ನ ವತಿಯಿಂದ, ನನ್ನ ಪಕ್ಷದ ವತಿಯಿಂದ ಹಾಗೂ ಸದನದ ವತಿಯಿಂದ ಅವರಿಗೆ ಹೃತ್ಪೂರ್ವಕ ನಮನಗಳನ್ನು ಸಲ್ಲಿಸುತ್ತೇನೆ. ಮತ್ತು ಅವರ ಆತ್ಮಕ್ಕೆ ಚಿರಶಾಂತಿ ದೊರಕಲಿ ಎಂದು ಪ್ರಾರ್ಥನೆ ಮಾಡುತ್ತೇನೆ ಮತ್ತು ಅವರ ಅಗಲುವಿಕೆಯಿಂದ ಆಗಿರತಕ್ಕ ನೋವನ್ನು ಸಹಿಸತಕ್ಕ ಶಕ್ತಿಯನ್ನು ದಯಾಮಯನಾದ ಭಗವಂತನು ಅವರ ಕುಟುಂಬಕ್ಕೆ ಮತ್ತು ಅವರ ಮಿತ್ರ ವರ್ಗಕ್ಕೆ ಕರುಣಿಸಿ ಆಶೀರ್ವದಿಸಲಿ ಎಂದು ಅನನ್ಯ ಭಕ್ತಿಯಿಂದ ಪ್ರಾರ್ಥನೆ ಮಾಡಿ ತಾವು ಮಂಡಿಸಿರತಕ್ಕ ನಿರ್ಣಯಕ್ಕೆ ಬೆಂಬಲವನ್ನು ಸೂಚಿಸಿ, ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಅಧ್ಯಕ್ಷರೇ, ತಾವು ಒಂದು ನಿರ್ಣಯವನ್ನು ಮಂಡಿಸಿ, ಅದರಲ್ಲಿ ಮಾಜಿ ಶಾಸಕರು, ರಾಜ್ಯ ಮಟ್ಟದಲ್ಲಿ, ರಾಷ್ಟ್ರ ಮಟ್ಟದಲ್ಲಿ ಹಾಗೂ ಅನೇಕ ರಂಗಗಳಲ್ಲಿ ಸೇವೆ ಸಲ್ಲಿಸಿರತಕ್ಕ 8 ಜನ ಗಣ್ಯರು ದೈವಾಧೀನರಾಗಿದ್ದಾರೆಂಬುದನ್ನು ಪ್ರಸ್ತಾಪಿಸಿದ್ದೀರಿ. ಭಗವಂತನು ಅವರ ಕುಟುಂಬಕ್ಕೆ, ಈ ದುಃಖವನ್ನು ಬರಿಸುವಂಥ ಶಕ್ತಿಯನ್ನು ಕೊಡಲಿ ಎಂದು ಪ್ರಾರ್ಥಿಸಿ ಮತ್ತು ಅಗಲಿದ ಗಣ್ಯರ ಆತ್ಮಕ್ಕೆ ಶಾಂತಿಯನ್ನು ಕೋರಿ, ಅವರು ಮಾಡಿದ ಸೇವೆ ಬಗ್ಗೆ ತಾವು ವಿವರವನ್ನು ಒದಗಿಸಿಕೊಟ್ಟಿರುವುದಕ್ಕೆ ನನ್ನ ಸಂಪೂರ್ಣ ಅನುಮೋದನೆ ಕೊಡುತ್ತಾ ಈ ರೀತಿ ಸೇವೆ ಸಲ್ಲಿಸಿದಂಥ ಗಣ್ಯರು, ನಾಡಿಗೋಸ್ಕರ, ದೇಶಕ್ಕೋಸ್ಕರ ಬೇರೆ ಬೇರೆ ರೀತಿಯಲ್ಲಿ ಏನು ದುಡಿದಿದ್ದಾರೆ ಈ ದಿಕ್ಕಿನಲ್ಲಿ ಅವರ ಅಪೇಕ್ಷೆಯನ್ನು ಪೂರೈಸುವ ದಿಕ್ಕಿನಲ್ಲಿ ನಾವೂ ಕೂಡ ಪರಿಶ್ರಮಿಸಿ, ಹಾಗೂ ಅವರು ಬಿಟ್ಟುಹೋದ ಕೆಲಸಗಳನ್ನು ಪೂರ್ಣ ಮಾಡುವ ಕಡೆ ನಾವು ಹೋಗಬೇಕಾಗಿದೆ, ಎಂದು ತಿಳಿಸಿ, ಅವರಲ್ಲರ ಆತ್ಮಕ್ಕೆ ಶಾಂತಿಯನ್ನು ಕೋರಿ, ತಾವು ಮಂಡಿಸಿರತಕ್ಕ ನಿರ್ಣಯಕ್ಕೆ ಸಂಪೂರ್ಣ ಅನುಮೋದನೆಯನ್ನು ಸಲ್ಲಿಸುತ್ತೇನೆ.

+ ಶ್ರೀ ಸಿ. ಬೈರೇಗೌಡ (ಮೇಮಗಲ್) : ಮಾನ್ಯ ಅಧ್ಯಕ್ಷರೇ, ಈ ದಿವಸ ನಾವು ಒಂದು ನೋವಿನ ಪ್ರಸಂಗದಲ್ಲಿ ಸಿಕ್ಕಿದ್ದೇವೆ. ಈ ರಾಷ್ಟ್ರದ ಮತ್ತು ನಮ್ಮ ರಾಜ್ಯದ ಆಗುಹೋಗುಗಳಲ್ಲಿ ಸಕ್ರಿಯವಾಗಿ ಭಾಗವಹಿಸಿರತಕ್ಕಂಥವರು, 8 ಜನ ಸದಸ್ಯರು ನಮ್ಮ ಕಣ್ಮುಂದೆ ಇಲ್ಲ. ಅವರಲ್ಲಿ ನನಗೆ ನೇರವಾಗಿ ಸಂಪರ್ಕ ಇದ್ದಂಥವರು ಮೂರು ಮಂದಿ ಡಾ. ಹುಂಬರವಾಡಿ, ಬಸವಪುನ್ನಯ್ಯ ಮತ್ತು, ಮತ್ತೊಬ್ಬ ಸ್ನೇಹಿತರಾದ ಕಲ್ಯಾಣರಾವ್ ಮೊಳಕೇರಿಯವರು. ನಾನು ಈ ಸದನದ ಸದಸ್ಯನಾಗಿ ಕೆಲಸ ಮಾಡುವಾಗ, ಮತ್ತು ಮಂತ್ರಿಯಾಗಿ ಕೆಲಸ ಮಾಡುವ ಸಂದರ್ಭದಲ್ಲಿ ಡಾ. ಹುಂಬರವಾಡಿಯವರು ಬಹಳ ನಿಷ್ಠೂರವಾಗಿ ನಡೆದುಕೊಳ್ಳುತ್ತಿದ್ದರು, ನಮ್ಮ ಪಕ್ಷ ಹಾಗೂ ನಮ್ಮ ಪಕ್ಷ ಹೋಗತಕ್ಕ ದಾರಿ, ಹಾಗೂ ಸರ್ಕಾರದ ನೀತಿಗಳ ಬಗ್ಗೆ ಬಹಳ ಕಠಿಣವಾಗಿ, ತೀಷ್ಣವಾಗಿ ವಿಮರ್ಶೆ ಮಾಡಿ, ತೀಕ್ಷ್ಣವಾದ ಅಭಿಪ್ರಾಯವನ್ನು ಪಕ್ಷದ ಸಭೆಯಲ್ಲಿ ವ್ಯಕ್ತಪಡಿಸುತ್ತಿದ್ದರು. ಅನ್ಯಾಯ ನಡೆದಂಥ ಸಂದರ್ಭದಲ್ಲಿ, ಅದು ಸಣ್ಣದು ಇರಬಹುದು ಅಥವಾ ದೊಡ್ಡದು ಇರಬಹುದು, ಬಹಳ ತೀವ್ರವಾಗಿ ಗಮನಿಸಿ ಅದರ ಬಗ್ಗೆ ಅಷ್ಟೇ ತೀಕ್ಷ್ಣತೆಯಿಂದ ಅಡಳಿತವನ್ನು ನಡೆಸತಕ್ಕವರ ಗಮನಕ್ಕೆ ತರುತ್ತಿದ್ದರು. ಈ ಕಾರಣದಿಂದಲೇ ಅವರು ಸರ್ಕಾರದ ಅಪಕೃಪೆಗೆ ತುತ್ತಾಗಬೇಕಾಗಿ ಬಂತು. ಅವರ ಮನಸ್ಸಿಗೆ ವೈಯಕ್ತಿಕವಾಗಿ ಆಘಾತವಾಗುವುದಕ್ಕಿಂತ ಹೆಚ್ಚಾಗಿ ಅವರಿಗೆ ನಷ್ಟವೂ ಆಗತಕ್ಕ ಸಂದರ್ಭ ಒದಗಿಬಂತು. ಇದೇ ರೀತಿಯಲ್ಲಿ ಕಲ್ಯಾಣರಾವ್ ಮೊಳಕೇರಿಯವರೂ ಅಷ್ಟೆ ಅತ್ಯಂತ ಸಾಮಾನ್ಯ ಕುಟುಂಬದಿಂದ ಬೆಳೆದು ಬಂದವರು. ಸಾಮಾನ್ಯರಲ್ಲಿ, ಸಾಮಾನ್ಯರಾಗಿ ಸಾಮಾನ್ಯ ಸಮಸ್ಯೆಗಳು ಬಂದಂಥ ಸಂದರ್ಭದಲ್ಲಿ, ಅವರು ಪ್ರತಿಭಟನೆ ವಿಚಾರದಲ್ಲಿ ಅತ್ಯಂತ ಮೇಲಕ್ಕೆ ಏರತಕ್ಕವರು. ಈ ಇಬ್ಬರು ಈಗಿರತಕ್ಕ ಈ ದೇಶದ ಮತ್ತು ನಮ್ಮ ರಾಜ್ಯದ ರಾಜಕೀಯದಲ್ಲಿ ಇಂತಹವರು ಇದ್ದಾರೆ ಎಂದು ನಂಬುವುದು ಕೂಡ ನಮಗೆ ಕಷ್ಟ ಮೊಳಕೇರಿಯವರು ಸದಾ ಸಮಸ್ಯೆಗಳ ಸುಳಿಯಲ್ಲಿ ಇರುತ್ತಿದ್ದರು. ವೈಯಕ್ತಿಕವಾಗಿ ಕೂಡ ಅವರಿಗೆ ಸಮಸ್ಯೆಗಳು ಇದ್ದವು . ಅವರ ಸಮಸ್ಯ ಎಲ್ಲಿಯವರೆಗೆ ಹೋಗುತ್ತಿತ್ತು ಎಂದರೆ ಕೊನೇ ಪಕ್ಷ ಅವರ ಪರಿಸ್ಥಿತಿ ಆಟೋರಿಕ್ಷಾದಲ್ಲಿ ಓಡಾಡುವುದಕ್ಕೂ ಅವರ

ಕೈಯಲ್ಲಿ ಆಗುತ್ತಿರಲಿಲ್ಲ. ಆದಕ್ಕಾಗಿ ಶಾಸಕರ ಭವನದ ಕೊಠಡಿಗಳಲ್ಲಿ, ಸ್ನೇಹಿತರ ಕೊಠಡಿಗಳಲ್ಲಿ ಉಳಿದುಕೊಂಡು ಅನೇಕ ಸ್ನೇಹಿತರ ನೆರವಿನಿಂದ ತಮ್ಮ ವ್ಯವಹಾರವನ್ನು ಸಾಮಾನ್ಯ ಜನರ ಪರವಾಗಿ ನಡೆಸುತ್ತಿದ್ದರು. ಅದನ್ನು ತಾವು ಬಹಳ ಸೂಕ್ಷ್ಮವಾಗಿ ಬಹಳ ಚೆನ್ನಾಗಿ ಹೇಳಿದ್ದೀರಿ. ಆ ವಿಚಾರದಲ್ಲಿ ನಾನು ನನ್ನ ಧ್ವನಿಯನ್ನು ಸಹ ಕೂಡಿಸುತ್ತೇನೆ. ಮಾನ್ಯ ಬಸವಪ್ಪುನ್ನಯ್ಯನವರು, ಈಗಾಗಲೇ ಈ ಸದನದಲ್ಲಿ ವ್ಯಕ್ತವಾಗಿರುವಂತೆ ಈ ದೇಶದ ಅಗ್ರಮಾನ್ಯ ನಾಯಕರಲ್ಲಿ ಒಬ್ಬರು. ತೆಲಂಗಾಣಾ ಹೋರಾಟದಲ್ಲಿ ಸಕ್ರಿಯವಾಗಿ ಭಾಗವಹಿಸಿ ಏನು ಸಾಮಾನ್ಯ ಜನರ, ದುರ್ಬಲವರ್ಗದವರ, ಬಡವರ ಶೋಷಣೆ ನಡೆಯುತ್ತಿತ್ತು, ಆ ಶೋಷಣೆಗೆ ವಿರುದ್ಧವಾಗಿ, ಸೈದ್ಧಾಂತಿಕವಾಗಿ ಜನರನ್ನು ತಯಾರು ಮಾಡಿದುದಷ್ಟೇ ಅಲ್ಲದೆ, ಬಂದೂಕವನ್ನೂ ಸಹ ಕೈಯಲ್ಲಿ ಹಿಡಿದುಕೊಂಡು ಹೋರಾಟ ನಡೆಸಿರತಕ್ಕವರು. ತೆಲಂಗಾಣಾ ಹೋರಾಟದಲ್ಲಿ ಅಂದಿನ ಜನರ ರಕ್ಷಣೆಗೆ ಬಂದೂಕದ ಬಲವನ್ನೂ ಸಹ ಪ್ರಯೋಗ ಮಾಡಿರತಕ್ಕಂಥವರು. ಅವರು ಈ ದೇಶದಲ್ಲಿ, ಪ್ರಪಂಚದಲ್ಲಿ ತುಳಿತಕ್ಕೆ ಸಿಕ್ಕಿರತಕ್ಕಂಥ ಶೋಷಣೆಗೆ ಒಳಪಟ್ಟಿರತಕ್ಕಂಥ ವರ್ಗಕ್ಕೆ ಸದಾ ಬೆಂಬಲವಾಗಿ ಇದ್ದಂಥವರು. ಅವರ ಜೊತೆಯಲ್ಲಿ ಮಾನ್ಯ ಸುಂದರಯ್ಯನವರೂ ಇದ್ದರು. ಬಸವಪ್ಪುನ್ನಯ್ಯನವರು ಈ ದೇಶದ ಎಡಶಕ್ತಿಗಳನ್ನು ಬೆಳೆಸತಕ್ಕಂಥಾದ್ದರಲ್ಲಿ ಮತ್ತು ಈ ಎಡ ಸಿದ್ಧಾಂತದ ಹಿಂದೆ ಇದ್ದಂಥ ಒಂದೇ ಆಗಿದ್ದಂಥ, ಏಕೀಕೃತವಾಗಿದ್ದಂಥ ಕಮ್ಯುನಿಷ್ಟ್ ಪಕ್ಷ ಒಂದು ಧೋರಣೆಯನ್ನು ಹಿಡಿದಂಥ ಸಂದರ್ಭದಲ್ಲಿ, ಸುಂದರಯ್ಯನವರೂ, ಬಸವಪ್ಪುನ್ನಯ್ಯನವರು ದೃಢವಾದ ನಿಲುವನ್ನು ತಳೆದು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ರಚನೆಯನ್ನು ಮಾಡತಕ್ಕದ್ದರಲ್ಲಿ ಬಹಳ ಪ್ರಮುಖವಾದ ಪಾತ್ರವನ್ನು ವಹಿಸಿದ್ದಂಥವರು. ಆದರ ಮೂಲಕ ಇವತ್ತು ಪ್ರಂಚದಲ್ಲಿ ಕಮ್ಯುನಿಸಂ ಕೆಲವು ಭಾಗಗಳಲ್ಲಿ ವಿಫಲವಾದರೂ ಸಹ ಇದುವರೆಗೆ ಆದರ ಒಂದು ಸೋಂಕು ನಮ್ಮ ದೇಶಕ್ಕೆ ಹರಡದೇ ಇರಬೇಕಾಗಿದ್ದರೆ ಅದಕ್ಕೆ ಬಸವಪ್ಪುನ್ನಯ್ಯನವರು ಹಾಗೂ ಸುಂದರಯ್ಯನವರ ಸೈದ್ಧಾಂತಿಕ ವಾದ ಏನಿದೆ ಅದು ಇವತ್ತಿಗೂ ಕೂಡಾ ಜೀವಂತವಾಗದೆ ಎಂಬುದಕ್ಕೆ ಅದೇ ಸಾಕ್ಷಿಯಾಗಿ ಇವತ್ತಿನ ದಿವಸ ಇಲ್ಲಿ ನಿಂತಿದೆ. ಅಂತವರು ಇವತ್ತಿನ ದಿವಸ ನಮ್ಮ ಕಣ್ಮುಂದೆ ಇಲ್ಲ. ಹುಟ್ಟಿದ ಪ್ರತಿಯೊಬ್ಬರೂ ಕೂಡಾ ಸಾಯಲೇಬೇಕು. ಆದರೆ ಬಸವಪ್ಪುನ್ನಯ್ಯನವರ ರೀತಿಯಲ್ಲಿ ಜನಕ್ಕೆ, ದೇಶಕ್ಕೆ, ಸಮಾಜಕ್ಕೆ ಬೆಳಕನ್ನೂ ಚೆಲ್ಲತಕ್ಕಂಥವರು ಯಾವತ್ತೂ ಕೂಡಾ ಚಿರಾಯುವಾಗಿರುತ್ತಾರೆ. ಆ ರೀತಿ ಅವರು ಚಿರಾಯುವಾಗಿರಲಿ ಎಂದು ಆಶಿಸಿ ನನ್ನ ಮಾತನ್ನು ಮುಗಿಸುತ್ತೇನೆ.

+ ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಅಧ್ಯಕ್ಷರೇ, ತಾವು ಮಂಡಿಸಿರತಕ್ಕಂಥ ಸಂತಾಪಸೂಚಕ ನಿರ್ಣಯಕ್ಕೆ ಕೆಲವು ಮಾತುಗಳನ್ನು ಸೇರಿಸುತ್ತಿದ್ದೇನೆ. ಶ್ರೀಮಾನ್ ಹುಂಬರವಾಡಿಯವರು, ಮೊಳಕೇರಿಯವರು, ಅಗ್ನಿಹೋತ್ರಿಯವರು ಬಸವಪ್ಪುನ್ನಯ್ಯನವರು, ಹನುಮಂತಯ್ಯನವರು ವಿನಾಯಕ ಕೃಷ್ಣ ಗೋಕಾಕ್‌ರವರು, ಪಾ.ವೆಂ. ಆಚಾರ್ಯರು, ಸತ್ಯಜಿತ್‌ರಾಯ್‌ರವರು ನಿಧನರಾಗಿದ್ದಾರೆ. ಇವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ, ಮೊಳಕೇರಿಯವರನ್ನು ನಾನು ವಿದ್ಯಾರ್ಥಿ ದೆಸೆಯಿಂದಲೂ ನೋಡಿದ್ದೇನೆ. ಬೀದರ್‌ನಲ್ಲಿ ನನ್ನನ್ನು ಕರೆದುಕೊಂಡು ಹೋಗಿ, ಕನ್ನಡದ ಬೆಳವಣಿಗೆಗೆ 25 ವರ್ಷಗಳಿಂದಲೂ ಅಪಾರವಾದ ಚಳವಳಿಯನ್ನು ನಡೆಸಿದಂಥ ಒಬ್ಬ ವ್ಯಕ್ತಿ. ಅತ್ಯಂತ ಸ್ನೇಹಪರರಾಗಿದ್ದರು. ಅವರ ಸಾವು ನಿಜವಾಗಲೂ ಅತ್ಯಂತ ಬಹಳ ಕೆಟ್ಟ ರೀತಿಯಲ್ಲಿ ಆದುದನ್ನು ಕೇಳಿ ನಮಗಂತೂ ಬಹಳ ದುಃಖವಾಯಿತು. ಅಗ್ನಿಹೋತ್ರಿಯವರು ನಾನು ಶಾಸಕನಾಗಿದ್ದಾಗ ಇಲ್ಲಿದ್ದರು. ಅವರು ಬಹಳ ಹಾಸ್ಯವಾಗಿ ಮಾತನಾಡತಕ್ಕಂಥವರು, ಆರೋಗ್ಯ ಇಲಾಖೆಯ ಬೇಡಿಕೆಯ ಮೇಲೆ ಅವರು ಮಾತನಾಡುವಾಗ, ಅವರ ಪ್ರತಿಮಾತಿಗೂ ಕೂಡಾ ಇಡೀ ಸದನ ಬಹಳ ನಗುತ್ತಾ ಇತ್ತು. ಅವರ ಮಾತಿನ ಧಾಟಿ ಅಷ್ಟು ಚೆನ್ನಾಗಿತ್ತು. ಅವರು ಸುಂದರವಾಗಿ ಮಾತನಾಡುತ್ತಿದ್ದರು.

ಅದೇ ಪಾ.ವೆಂ. ಆಚಾರ್ಯರು ಹಿರಿಯ ಪತ್ರಕರ್ತರು. ಅವರು ಈ ನಾಡಿಗೆ ಪತ್ರಕರ್ತರಾಗಿ ಅಪರಾವಾದಂತಹ ಸೇವೆಯನ್ನು ಸಲ್ಲಿಸಿರತಕ್ಕಂಥವರು. ಅದೇ ರೀತಿ ಶ್ರೀ ವಿನಾಯಕ ಕೃಷ್ಣ ಗೋಕಾಕ್‌ರ ಬಗ್ಗೆ ತಾವು ಹೇಳಿದ್ದೀರಿ. ಅವರು ಈ ನಾಡಿನ ಕನ್ನಡ ಸಾಹಿತ್ಯ ಕ್ಷೇತ್ರದ ದಿಗ್ಗಜ, ಅವರ

ಅಗಲಿಕೆ ಕನ್ನಡ ನಾಡಿಗೆ ಅಪಾರವಾದಂತಹ ನಷ್ಟವನ್ನು ತಂದಿದೆ. ನಾವು ಈ ಮಹನೀಯರುಗಳ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ ಇಂದು ಅನೇಕ ಸಭೆಗಳಲ್ಲಿ ಇನ್ನು ಕೆಲವು ಮಾಜಿ ಶಾಸಕರುಗಳು ನಿಧನರಾದಾಗ ಅವರ ವಿಚಾರಗಳ ಬಗ್ಗೆ ಪ್ರಸ್ತಾಪ ಮಾಡುತ್ತೇವೆ. ಇವತ್ತು ಅನಿವಾರ್ಯವಾಗಿ ಶ್ರೀ ಉಮರ್ಬ್ಬರವರನ್ನು ಮರೆತಿದ್ದೇವೆ. ಹಿಂದೆ ಈ ಸದನದಲ್ಲಿ ಮಾತನಾಡಿದ್ದೇವೆ. ಅವರ ಮನೆಯವರನ್ನು ಕರೆಸಬೇಕು ಅವರಿಗೆ ಸಹಾಯ ಮಾಡಬೇಕು. ಸಹಕಾರ ಕೊಡಬೇಕು ಎಂದು ಈ ಸದನದಲ್ಲಿ ಹೇಳಿದ್ದೇವೆ. ನಮ್ಮಿಂದ ಸರ್ಕಾರದಿಂದ ಯಾವ ವಿಧವಾದ ಸಹಕಾರ ಅವರಿಗೆ ದೊರತಿಲ್ಲ ನೋವಿನಲ್ಲಿರತಕ್ಕಂಥ ಜನಗಳಿಗೆ ಇವತ್ತಿನವರೆಗೂ ನಮ್ಮಿಂದ ಏನೂ ಸಹಾಯ ಆಗಿಲ್ಲ ಎನ್ನುವ ಮಾತನ್ನು ನಾನು ಮತ್ತೊಮ್ಮೆ ತಮ್ಮ ಗಮನಕ್ಕೆ ತರುತ್ತಾ ಪಾಪ ಅವರ ಪತ್ನಿಯವರು ಮಾನ್ಯ ಮುಖ್ಯಮಂತ್ರಿಯವರ ಮನೆಗೂ ಬಂದಿದ್ದರು, ಆದರೆ ಇತ್ತೀಚೆನವರೆಗೂ ಏನೂ ಆಗಿಲ್ಲ. ಅದೇ ರೀತಿಯಲ್ಲಿ ಗುಜ್ಜಾಲ ಹನುಮಂತಪ್ಪನವರು ನಿಧನರಾದಾಗ ಇದೇ ಸದನದಲ್ಲಿ ಏನಾದರೂ ಸಹಾಯ ಮಾಡಬೇಕು ಎಂದು ಹೇಳಿದ್ದೆವು. ಹಳೆಯ ಪುಟಗಳು ಮುಚ್ಚಿಹೋಗುತ್ತಿರುತ್ತವೆ, ಹೊಸ ಹೊಸ ಪುಟಗಳು ಬರುತ್ತಿವೆ. ನಾವು ಮಾತನಾಡುತ್ತೇವೆ. ನಾವು ಸಂತಾಪಸೂಚಕ ನಿರ್ಣಯಗಳನ್ನು ಪಾಸ್ ಮಾಡಿ ಅವರ ಆತ್ಮಕ್ಕೆ ಶಾಂತಿಯನ್ನು ಕೋರುತ್ತಾ ಇರುತ್ತೇವೆ. ಅಷ್ಟೇ! ಆದರೆ ಅವರನ್ನೇ ನಂಬಿರತಕ್ಕಂಥ ಜನಗಳ ಬಗ್ಗೆ ಚಿಂತನೆ ಹರಿಸಬೇಕು ಎಂದು ಹೇಳಿ ನಿಧನಹೊಂದಿರತ್ಕವರೆಲ್ಲರ ಆತ್ಮಕ್ಕೆ ಶಾಂತಿಯನ್ನು ಕೋರಿ ನನ್ನ ಮಾತನ್ನು ಮುಗಿಸುತ್ತೇನೆ.

+ SRI QUMURUL ISLAM (Gulbarga) : Mr. Speaker Sir, Dr. N.S. Humbarawadi, Sri Kalyana Rao Molakeri Sri S.V. Agnihotri and Sri M. Hanumantaiah are no more with us. Once they were members of this House and the people of the State cannot forget their services. At the same time, the State has lost a very good communist leader Sri M. Basavapunnaiah and also great scholar Sri V.K. Gokak and a senior journalist Sri V.M. Acharya. At th same time we also lost Sri Sathyajit Ray who was done lot of contribution towards the film industry of India.

I, at this juncture, pray Almighty Allah that the souls of these persons may rest in peace in heaven and also the Almighty Allah give courage to the members of their families to bear the loss.

Sri B.I. Patil (Uchaguon) : Mr. Speaker Sir, it is very sad to hear the sudden denise of Sri N.S. Humbarawadi and Sri Kalyana Rao Molakeri, They were all very much associated with us. They were former members of this House.

On behalf of the MES we join in oftering our heart-falt condolences to the members of the bereaved families.

We also condole the death of other dignitaries and we pray the Almighty to give courage to the bereaved families and bear this irreparable loss.

ಪ್ರೊ. ಎಂ.ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮಾಂತರ) : ಸನ್ಮಾನ್ಯ ಅಧ್ಯಕ್ಷರೇ ನಮ್ಮನ್ನು ಬಿಟ್ಟು ಅಗಲಿರತಕ್ಕಂಥ ಎಲ್ಲಾ ಗಣ್ಯರಿಗೆ ರೈತ ಸಂಘದ ಪರವಾಗಿ ಗೌರವಗಳನ್ನು ಅರ್ಪಿಸುತ್ತೇನೆ.

+ ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಅಧ್ಯಕ್ಷರೇ ತಾವು ಸಂತಾಪಸೂಚನೆ ನಿರ್ಣಯವನ್ನು ಏನು ಮಂಡಿಸಿದ್ದೀರಿ ಅದಕ್ಕೆ ಸಂಪೂರ್ಣವಾಗಿ ನನ್ನ ಬೆಂಬಲವನ್ನು ಕೊಟ್ಟು ಒಂದೆರಡು ವಿಷಯಗಳ ಬಗ್ಗೆ ಮಾತ್ರ ನಾನು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ. ಕಳೆದ ಅಧಿವೇಶನದ ನಂತರ ನಮ್ಮ ನಾಡಿನ ಹೆಸರಾಂತ ಲೇಖಕರು ಸಾಹಿತಿಗಳು ಆದ ಶ್ರೀ ನಾಡಿಗೇರ ಕೃಷ್ಣರಾಯರು ನಿಧನರಾಗಿದ್ದಾರೆ. ಅವರ ಹೆಸರನ್ನು ಇದರಲ್ಲಿ ಸೇರಿಸಬೇಕೆಂದು ನಾನು ಈ

ಸಂದರ್ಭದಲ್ಲಿ ತಮ್ಮಲ್ಲಿ ಬೇಡುತ್ತೇನೆ. ಅದೇ ರೀತಿಯಲ್ಲಿ ಪ್ರಜಾಮತದ ಸಂಪಾದಕರಾಗಿದ್ದ ಶ್ರೀಮಾನ್ ಹ.ಮೆ. ನಾಗರಾಜರಾವ್‌ರವರು ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ದೊಡ್ಡ ಸೇವೆಯನ್ನು ಮಾಡಿದ್ದಾರೆ. ಅವರು ಸಹ ನಮ್ಮನ್ನು ಅಗಲಿದ್ದಾರೆ ಅವರ ಹೆಸರನ್ನು ಇದರಲ್ಲಿ ಸೇರಿಸಬೇಕೆಂದು ನಾನು ಈ ಸಂದರ್ಭದಲ್ಲಿ ಹೇಳಿ ಅವರ ಆತ್ಮಕ್ಕೂ ಶಾಂತಿಯನ್ನು ಕೋರಿ ಇನ್ನು ನಮ್ಮ ಪಕ್ಷದಲ್ಲಿದ್ದಂತಹ ಸನ್ಮಾನ್ಯ ಕಲ್ಯಾಣರಾವ್ ಮೊಳಕೇರಿಯವರು ಆಕಸ್ಮಿಕವಾಗಿ ನಿಧನರಾದರು. ಅವರ ನಿಧನರಾದ ನಂತರ ನಾನು ಬೀದರ್‌ಗೆ ಹೋಗಿದ್ದೆ ಅವರ ಪತ್ನಿಯ ಪರಿಸ್ಥಿತಿ ಬಹಳ ಚಿಂತಾಜನಕವಾಗಿದೆ. ಅವರು ಕೊಳಚೆ ಪ್ರದೇಶದಲ್ಲಿ ಒಂದು ಸಣ್ಣದಾದ ಅಂದರೆ 15 × 20 ಅಡಿ ಜಾಗದಲ್ಲಿ ಒಂದು ಸಣ್ಣ ಮನೆ ಕಟ್ಟಿಸಿದ್ದಾರೆ ಅದಕ್ಕೆ ಗಾರೆ ಕೂಡ ಹಾಕಿಸಿಲ್ಲ. ಅವರು ಬಹಳ ಕಷ್ಟದಲ್ಲಿದ್ದಾರೆ. ನಾನು ಮಾನ್ಯ ಮುಖ್ಯಮಂತ್ರಿಗಳಿಗೆ ಈ ಸಂದರ್ಭದಲ್ಲಿ ಒತ್ತಾಯ ಮಾಡತಕ್ಕಂಥಾದ್ದೇನೆಂದರೆ, ಅವರಿಗೆ ಪರಿಹಾರ ಕೊಡತಕ್ಕಂಥಾದ್ದರಲ್ಲಿ ಕಾನೂನು ದೃಷ್ಟಿಯಿಂದ ಅಡಚಣೆ ಬರಬಹುದು. ಅವರ ಹೆಂಡತಿಯವರಿಗೆ ಅಥವಾ ಅವರ ಸಂಬಂಧಿಕರಿಗೆ ಜಮೀನು ಕೂಡಾ ಇಲ್ಲ. ಮಾನ್ಯ ವಾಟಾಳ್ ನಾಗರಾಜ್‌ರವರು ಹೇಳಿದ ಹಾಗೆ ಕಳೆದ 22–23 ವರ್ಷಗಳಿಂದ ಜನಪರ ಹೋರಾಟಗಳಲ್ಲಿ ಭಾಗವಹಿಸಿಕೊಂಡು ಬಂದವರು. ಅವರು ವೈಯಕ್ತಿಕವಾಗಿ ಜೀವನದ ಕಡೆ ಗಮನ ಕೊಟ್ಟಿರಲಿಲ್ಲ. ಆ ಕಾರಣದಿಂದ ನಾನು ಮುಖ್ಯಮಂತ್ರಿಗಳಲ್ಲಿ ಒತ್ತಾಯ ಮಾಡುತ್ತೇನೆ, ಅವರ ಕುಟುಂಬ ವರ್ಗದವರಿಗೆ ಸರ್ಕಾರ ಉದ್ಯೋಗವನ್ನು ಬೀದರ್‌ನಲ್ಲೇ ತಕ್ಷಣ ಮಾಡಿಸಬಹುದು. ತಾವು ಅದನ್ನು ಮಾಡಬೇಕೆಂದು ನಾನು ಒತ್ತಾಯ ಮಾಡುತ್ತೇನೆ. ಮತ್ತೆ ಸಾಹಿತ್ಯ ಲೋಕದ ದಿಗ್ಗಜರಾಗಿದ್ದ ವಿನಾಯಕ ಕೃಷ್ಣ ಗೋಕಾಕ್‌ರವರು ಕನ್ನಡ ಸಾಹಿತ್ಯ ಮತ್ತು ಮರಾಠಿ ಸಾಹಿತ್ಯ ಲೋಕಕ್ಕೆ ಮಾಡಿರತಕ್ಕಂಥ ಸೇವೆ ಬಹಳ ಅಪಾರವಾದುದಾಗಿದೆ. ಮಾನ್ಯ ಗೋಕಾಕ್‌ರವರನ್ನು ಮರಾಠಿ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರನ್ನಾಗಿ ಮಾಡಬೇಕೆಂದು ಒಂದೂವರೆ ವರ್ಷಗಳ ಹಿಂದೆ ಪ್ರಯತ್ನ ನಡೆದಿತ್ತು. ಕೆಲವು ರಾಜಕಾರಣಿಗಳ ಎಳೆದಾಟದಿಂದ ಅದು ಆಗಲಿಲ್ಲ. ಕೆಲವು ಮರಾಠಿ ಭಾಷೆಯ ಸಾಹಿತಿಗಳೇ ಅವರನ್ನು ಅಧ್ಯಕ್ಷರನ್ನಾಗಿ ಮಾಡಬೇಕೆಂದು ಹೇಳಿದ್ದರು. ಆದರೆ ಅದು ಆಗದೇ ಇದ್ದುದು ದುರ್ದೈವದ ಸಂಗತಿಯಾಗಿದೆ. ಮಾನ್ಯ ಗೋಕಾಕ್‌ರವರು ಎರಡೂ ಭಾಷೆಗಳಲ್ಲಿ ಮಾಡಿರತಕ್ಕಂಥ ಅಪಾರವಾದ ಸಾಧನೆಯನ್ನು ಸನ್ಮಾನಿಸಿಕೊಳ್ಳಬೇಕಾದರೆ ನಮ್ಮ ರಾಜ್ಯದಲ್ಲಿ ಒಂದು ವಿಶ್ವವಿದ್ಯಾನಿಲಯಕ್ಕೆ ಅವರ ಹೆಸರನ್ನು ಇಡಬೇಕೆಂದು ಈ ಸಂದರ್ಭದಲ್ಲಿ ನಾನು ಸರ್ಕಾರವನ್ನು ಒತ್ತಾಯ ಮಾಡಿ ತಮ್ಮ ಜೊತೆಗೆ ಸಂತಾಪ ಸೂಚಕ ನಿರ್ಣಯಕ್ಕೆ ಬೆಂಬಲ ಸೂಚಿಸಿ ನನ್ನ ಎರಡು ಮಾತುಗಳನ್ನು ಮುಗಿಸುತ್ತೇನೆ.

ಅಧ್ಯಕ್ಷರು : ಅಗಲಿದ ಎಲ್ಲಾ ಮಹನೀಯರುಗಳ ಗೌರವಾರ್ಥ ಮಾನ್ಯ ಸದಸ್ಯರುಗಳು ಒಂದು ನಿಮಿಷ ಎದ್ದು ನಿಂತು ಮೌನಾಚರಣೆ ಮಾಡಬೇಕೆಂದು ತಿಳಿಸುತ್ತೇನೆ.

(ಅಗಲಿದ ಮಾನ್ಯರುಗಳ ಗೌರವಾರ್ಥ ಸಭೆಯು ಎದ್ದು ನಿಂತು ಎರಡು ನಿಮಿಷಗಳ ಕಾಲ ಮೌನಾಚರಣೆಯನ್ನು ಮಾಡಿತು.)

ಶ್ರೀ ಬಿ.ಎಸ್. ಯಡಿಯೂರಪ್ಪ : ಮಾನ್ಯ ಅಧ್ಯಕ್ಷರೆ,
ಅಧ್ಯಕ್ಷರು ಈಗ ಒಂದು ಪ್ರಕಟಣೆ ಇದೆ.

ಪ್ರಕಟಣೆ

ಅಧ್ಯಕ್ಷರು : ದಿನಾಂಕ 8ನೇ ಜೂನ್, 1992ರಂದು ನಡೆದ ಉಪ ಚುನಾವಣೆಯಲ್ಲಿ ಕುಣಿಗಲ್, ಗದಗ್ ಹಾಗೂ ಬೆಳಗಾಂ ವಿಧಾನಸಭಾ ಕ್ಷೇತ್ರಗಳಿಂದ 9ನೇ ವಿಧಾನಸಭೆಗೆ ಅನುಕ್ರಮವಾಗಿ ಸದಸ್ಯರಾಗಿ ಆಯ್ಕೆಯಾಗಿರುವ ಶ್ರೀಯುತರುಗಳಾದ ಮಾನ್ಯ ವೈ.ಕೆ. ರಾಮಯ್ಯ, ಮಾನ್ಯ ಬಿ.ಆರ್. ಪಾಟೀಲ್ ಹಾಗೂ ಮಾನ್ಯ ಅರ್ಜುನರಾವ್ ಹಿಷೋಪಕರ್ ಅವರು ಗುರುವಾರ ಅಂದರೆ ದಿನಾಂಕ 18–6–92ರಂದು ಪ್ರಮಾಣ ವಚನ ಸ್ವೀಕರಿಸಿದ್ದಾರೆ. ಮಾನ್ಯ ಸದಸ್ಯರುಗಳನ್ನು ಸಭೆಗೆ ಪರಿಚಯಿಸಿಕೊಡುತ್ತೇವೆ.